# 8 ನೇ ತರಗತಿ ಗಣಿತ ಅರ್ಧವಾರ್ಷಿಕ ಪರೀಕ್ಷೆ-2025-2026

# ಪ್ರಶ್ನೆಪತ್ರಿಕೆ ವಿನ್ಯಾಸ ಮತ್ತು ನೀಲನಕ್ಷೆ

## ಆಯಾಮ-1(Dimension-1)

## ಅಧ್ಯಾಯವಾರು ಅಂಕಗಳ ವಿಂಗಡಣೆ

| **ಕ್ರ.ಸಂ** | **ಘಟಕ** | **ನಿಗದಿಮಾಡಿದ ಅಂಕಗಳು** |
|---|---|---|
| 1 | ಭಾಗಲಬ್ಧ ಸಂಖ್ಯೆಗಳು | **5** |
| 2 | ಒಂದು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳು | 7 |
| 3 | ಚತುರ್ಭುಜಗಳ ಪರಿಚಯ | 8 |
| 4 | ದತ್ತಾಂಶಗಳ ನಿರ್ವಹಣೆ | **7** |
| 5 | ವರ್ಗಗಳು ಮತ್ತು ವರ್ಗಮೂಲಗಳು | 7 |
| 6 | ಘನಗಳು ಮತ್ತು ಘನಮೂಲಗಳು | **6** |
| | ಒಟ್ಟು | **40** |

## ಆಯಾಮ-2 (Dimension-2)

## ಜ್ಞಾನಗ್ರಹಣ ಆಧಾರಿತ ಅಂಕಗಳ ವಿಂಗಡಣೆ(Weightage to Cognitive level)

| **ಕ್ರ.ಸಂ** | **ಜ್ಞಾನ ಗ್ರಹಣ ಹಂತಗಳು** | **ಶೇಕಡಾವಾರು(%)** | **ಅಂಕಗಳು** |
|---|---|---|---|
| 1 | ಸ್ಮರಣೆ (Remembering) | 15% | 6 |
| 2 | ತಿಳುವಳಿಕೆ (Understanding) | 55% | 22 |
| 3 | ಅನ್ವಯ ಮತ್ತು ವಿಶ್ಲೇಷಣೆ (Application and Analysis) | 20% | 8 |
| 4 | ಕೌಶಲ್ಯ(Skill) | 10% | 4 |

## ಆಯಾಮ-3 (Dimension-3)

# ಪ್ರಶ್ನೆಗಳ ವಿಧಗಳ ಆಧಾರಿತ ಅಂಕಗಳ ವಿಂಗಡಣೆ(MARKS DISTRIBUTION BASED ON TYPE OF QUESTIONS)

| ಕ್ರ.ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಪ್ರಶ್ನೆಗಳ ಸಂಖ್ಯೆ | ಒಟ್ಟು ಅಂಕಗಳು |
|---|---|---|---|
| **1** | ಬಹುಆಯ್ಕೆ ಪ್ರಶ್ನೆಗಳು(MULTIPLE CHOICE QUESTIONS)<br>(ಒಂದು ಅಂಕದ ಪ್ರಶ್ನೆಗಳು) | **5** | **5** |
| **2** | ಅತಿ ಕಿರು ಅಂಕದ ಪ್ರಶ್ನೆಗಳು(VERY SHORT ANSWER)<br>(ಒಂದು ಅಂಕದ ಪ್ರಶ್ನೆಗಳು) | **5** | **5** |
| **3** | ಕಿರು ಉತ್ತರದ ಪ್ರಶ್ನೆಗಳು(SHORT ANSWER QUESTIONS)<br>(ಎರಡು ಅಂಕದ ಪ್ರಶ್ನೆಗಳು) | **5** | **10** |
| **4** | ದೀರ್ಘ ಉತ್ತರದ ಪ್ರಶ್ನೆಗಳು-1(LONG ANSWER-1)<br>(ಮೂರು ಅಂಕದ ಪ್ರಶ್ನೆಗಳು) | **4** | **12** |
| **5** | ದೀರ್ಘ ಉತ್ತರದ ಪ್ರಶ್ನೆಗಳು-2(LONG ANSWER-2)<br><br>(ನಾಲ್ಕು ಅಂಕದ ಪ್ರಶ್ನೆಗಳು) | **2** | **8** |
| **7** | ಒಟ್ಟು(TOTAL) | **21** | **40** |

# ನೀಲನಕಾಶೆ

| ಘಟಕಗಳು | ಜ್ಞಾನ | | | | | ತಿಳುವಳಿಕೆ | | | | | | ಅನ್ವಯ | | | | | ಕೌಶಲ್ಯ | | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|---|---|---|---|
| | ಬ ಆ | 1 ಅಂಕ | 2 ಅಂಕ | 3 ಅಂಕ | 4 ಅಂಕ | ಬ ಆ | 1 ಅಂಕ | 2 ಅಂಕ | 3 ಅಂಕ | 4 ಅಂಕ | 5 ಅಂಕ | ಬ ಆ | 1 ಅಂಕ | 2 ಅಂಕ | 3 ಅಂಕ | 4 ಅಂಕ | 2 ಅಂಕ | 3 ಅಂಕ | 4 ಅಂಕ | ಪ್ರಶ್ನೆ | ಅಂಕ |
| **1.** ಭಾಗಲಬ್ಧ ಸಂಖ್ಯೆಗಳು | 1(1) | 1(1) | | | | | | | 3(1) | | | | | | | | | | | **3** | **5** |
| **2.** ಒಂದು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳು | | | | | | 1(1) | 1(1) | | 3(1) | | | | | 2(1) | | | | | | **4** | **7** |
| **3.** ಚತುರ್ಭುಜಗಳ ಪರಿಚಯ | 1(1) | | | | | 1(1) | | 2(1) | | 4(1) | | | | | | | | | | **4** | **7** |
| **4.** ದತ್ತಾಂಶಗಳ ನಿರ್ವಹಣೆ | 1(1) | | | | | | | 2(1) | | | | | | | | | | | 4(1) | **3** | **8** |
| **5.** ವರ್ಗಗಳು ಮತ್ತು ವರ್ಗಮೂಲಗಳು | | 1(1) | | | | | | | 3(1) | | | 1(1) | | 2(1) | | | | | | **4** | **7** |
| **6.** ಘನಗಳು ಮತ್ತು ಘನಮೂಲಗಳು | 1(1) | | | | | | | 2(1) | | | | | | | 3(1) | | | | | **3** | **6** |
| **ಒಟ್ಟು** | **6 (6)** | | | | | **22(10)** | | | | | | **8(4)** | | | | | **4(1)** | | | **21** | **40** |

**ಸೂಚನೆ:** ಆವರಣದ ಹೊರಗೆ ಇರುವುದು ಅಂಕಗಳು, ಆವರಣದ ಒಳಗೆ ಇರುವುದು ಪ್ರಶ್ನೆಗಳ ಸಂಖ್ಯೆ. '*' ಚಿಹ್ನೆಯು ಅಥವಾ ಪ್ರಶ್ನೆಯನ್ನು ಸೂಚಿಸುತ್ತದೆ.

## $8^{th}$.ಅರ್ಧವಾರ್ಷಿಕ ಪರೀಕ್ಷೆ-(S.A-1) ಪರೀಕ್ಷೆ-2025-2026

**ವಿಷಯ : ಗಣಿತ** **ಗರಿಷ್ಠ ಅಂಕಗಳು : 40** **ಸಮಯ : 90 ನಿಮಿಷಗಳು**

**I). ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ , ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ:** **5×1=5**

**1**. ಭಾಗಲಬ್ಧ ಸಂಖ್ಯೆಗಳು ಆವೃತವಾಗಿರದ ಗಣಿತ ಕ್ರಿಯೆಯು

A) ಸಂಕಲನ B) ವ್ಯವಕಲನ C) ಗುಣಾಕಾರ D) ಭಾಗಾಕಾರ

**2**. ಈ ಕೆಳಗಿನವುಗಳಲ್ಲಿ ಪೂರ್ಣ ಘನ ಸಂಖ್ಯೆಯು

A) 128 B) 100 C) 1000 D) 225

**3.** ಮೊದಲ 8 ಬೆಸ ಸ್ವಾಭಾವಿಕ ಸಂಖ್ಯೆಗಳ ಮೊತ್ತ

A) 16 B) 64 C) 36 D) 8

**4.** 2x -3 = 7 ರೇಖಾತ್ಮಕ ಸಮೀಕರಣದಲ್ಲಿ 'x' ನ ಬೆಲೆಯು

A) 10 B) 5 C) -2 D) 2

**5**. ಒಂದು ಸಮಾಂತರ ಚತುರ್ಭುಜದ ಪ್ರತಿಕೋನವು $90^0$ ಆದರೆ ಆ ಆಕೃತಿಯು

A) ವರ್ಗ ಮತ್ತು ಆಯತ B) ಆಯತ C) ಸಮಾಂತರ ಚತುರ್ಭುಜ D) ವರ್ಗ

**II ) ಬಿಟ್ಟಸ್ಥಳ ಪೂರ್ಣಗೊಳಿಸಿ:** **5×1=5**

**6.** ನಕ್ಷೆಯ 4-ವಿಧಗಳನ್ನು ಹೆಸರಿಸಿ.

**7.** 2X-3= X+2 ಈ ಸಮೀಕರಣದ ಎಡಭಾಗದಲ್ಲಿರುವ ಪದೋಕ್ತಿಯನ್ನು ಬರೆಯಿರಿ.

**8.** ಭಾಗಲಬ್ಧ ಸಂಖ್ಯೆಗಳ ವಿತರಣಾ ನಿಯಮ ಪೂರ್ಣಗೊಳಿಸಿ. a ( b + c ) = ab + .....


**9**. 9-ಬಾಹುಗಳುಳ್ಳ ನಿಯಮಿತ ಬಹುಭುಜಾಕೃತಿಯಲ್ಲಿ ಪ್ರತಿ ಹೊರಕೋನದ ಅಳತೆ ಎಷ್ಟು?

**10.** ಯಾವುದೇ ವರ್ಗಸಂಖ್ಯೆಯ ಬಿಡಿಸ್ಥಾನದಲ್ಲಿ ಇರುವ ಅಂಕಿಗಳನ್ನು ಬರೆಯಿರಿ.

**III) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **5×2=10**

**11.** ಅವಿಭಾಜ್ಯ ಅಪವರ್ತನ ವಿಧಾನದಿಂದ 196 ರ ವರ್ಗಮೂಲವನ್ನು ಕಂಡುಹಿಡಿಯಿರಿ.

**12.** ಕೆಳಗಿನ ಆಕೃತಿಯಲ್ಲಿ 'x' ನ ಬೆಲೆ ಕಂಡುಹಿಡಿಯಿರಿ.




**13.** ಒಂದು ದಾಳ (1 ರಿಂದ 6 ಸಂಖ್ಯೆ ಹೊಂದಿರುವ) ವನ್ನು ಒಂದು ಬಾರಿ ಎಸೆದಾಗ ಅವಿಭಾಜ್ಯ ಸಂಖ್ಯೆ ಮೇಲೆ ಬರುವ ಸಂಭವನೀಯತೆ ಕಂಡುಹಿಡಿಯಿರಿ.

**14**. 512 ಈ ಸಂಖ್ಯೆಯ ಘನಮೂಲವನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.

**15.** ಬಿಡಿಸಿ. 6m - 5 = 4m + 11

**IV) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **3×4=12**

**16.** ಇವುಗಳಲ್ಲಿ ಬಳಸಲಾಗಿರುವ ಭಾಗಲಬ್ಧ ಸಂಖ್ಯೆಗಳ ಗುಣಾಕಾರದ ಗುಣಲಕ್ಷಣವನ್ನು ಹೆಸರಿಸಿ.

i) $-\frac{4}{5} \times 1 = 1 \times -\frac{4}{5} = -\frac{4}{5}$ ii) - $\frac{13}{17} \times \frac{-2}{7} = \frac{-2}{7} \times -\frac{13}{17}$ iii) $\frac{-19}{29} \times \frac{29}{-19} = 1$

**17.** 68600 ಪೂರ್ಣ ಘನವೇ? ಇಲ್ಲವಾದಲ್ಲಿ ಅದನ್ನು ಕನಿಷ್ಠ ಯಾವ ಸ್ವಾಭಾವಿಕ ಸಂಖ್ಯೆಯಿಂದ ಗುಣಿಸಿದರೆ ಅದು

ಪೂರ್ಣಘನವಾಗುತ್ತದೆ?

**18.** ರೇಖಾತ್ಮಕ ಸಮೀಕರಣವನ್ನು ಬಿಡಿಸಿ. $15(y-4)-2(y-9)+5(y+6)$

**19.** ಒಬ್ಬ ತೋಟಗಾರನ ಬಳಿ 1000 ಸಸಿಗಳಿವೆ. ಅವುಗಳನ್ನು ಅಡ್ಡಸಾಲುಗಳ

ಸಂಖ್ಯೆ ಮತ್ತು ಕಂಬಸಾಲುಗಳ ಸಂಖ್ಯೆ ಸಮವಿರುವಂತೆ ನೆಡಲು ಇಚ್ಛಿಸಿದ್ದಾನೆ. ಈ ರೀತಿ ಮಾಡಲು


ಅವನಿಗೆ ಇನ್ನು ಕನಿಷ್ಠ ಎಷ್ಟು ಸಸಿಗಳು ಬೇಕಾಗುತ್ತವೆ?

**ಅಥವಾ**

3136 ಈ ಸಂಖ್ಯೆಯ ವರ್ಗಮೂಲವನ್ನು ಭಾಗಾಕಾರ ವಿಧಾನದಿಂದ ಕಂಡುಹಿಡಿಯಿರಿ.

**V ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **4 × 2 = 8**

**20.** ಈ ಕೆಳಗೆ ಕೊಟ್ಟಿರುವ ಚಿತ್ರಗಳಾದ GUNS ಮತ್ತು RUNS ಸಮಾಂತರ ಚತುರ್ಭುಜಗಳಾಗಿವೆ. x ಮತ್ತು y ಗಳನ್ನು ಕಂಡುಹಿಡಿಯಿರಿ.(ಅಳತೆಗಳು ಸೆಂ.ಮೀ ನಲ್ಲಿವೆ).




**ಅಥವಾ** ಚತುರ್ಭುಜದ ವಿಧಗಳನ್ನು ಪಟ್ಟಿಮಾಡಿ. ಎಲ್ಲಾ ಸಮಾಂತರ ಚತುರ್ಭುಜಗಳ ಒಂದೊಂದು ಗುಣಲಕ್ಷಣಗಳನ್ನು ಪಟ್ಟಿಮಾಡಿ.

**21.** ಕೆಳಗಿನ ಮಾಹಿತಿಗೆ ಒಂದು ಪೈ ಚಾರ್ಟನ್ನು ಬರೆಯಿರಿ, ವಿವಿಧ ಜನರು ಇಷ್ಟಪಡುವ ಬಣ್ಣಗಳನ್ನು ಕೆಳಗೆ ಕಾಣಿಸಿದೆ.

| **ಬಣ್ಣಗಳು** | ನೀಲಿ | ಹಸಿರು | ಕೆಂಪು | ಹಳದಿ | ಮೊತ್ತ |
|---|---|---|---|---|---|
| **ಜನರ ಸಂಖ್ಯೆ** | 18 | 9 | 6 | 3 | 36 |

**ರಚನೆ :** ಶ್ರೀ ಚಂದ್ರಶೇಖರ ,ಫ. ಜೋಗಿನ, ಗಣಿತ ಶಿಕ್ಷಕರು, ಸರಕಾರಿ ಪ್ರೌಢಶಾಲೆ ಯಲಿಶಿರೂರ, ತಾ : ಗದಗ ಗ್ರಾಮೀಣ ಜಿ: ಗದಗ ಮೊಬೈಲ್ ಸಂಖ್ಯೆ : 9945821074